# ಗೋ ವಿಶ್ವ

Cow Universe

गौ विश्व

ಸರ್ವಧಾರಿ ಸಂವತ್ಸರ | ಕಾರ್ತಿಕ-ಮಾರ್ಗಶಿರ | ನವಂಬರ್ ೨೦೦೮ | ಸಂಪುಟ-೨ | ಸಂಚಿಕೆ-೧೧

ಗುರುವಾಣಿ

## ವಿಶ್ವಮಂಗಲಕ್ಕಾಗಿ ಭಾರತದ ಗೋಯಾತ್ರೆ



ಗೋವು ಉಳಿಯಬೇಕು. ಅದು ಭಾರತಕ್ಕೆ ಅನಿವಾರ್ಯ. ವಿಶ್ವಕ್ಕೂ ಅನಿವಾರ್ಯವೇ. ಭಾರತೀಯತೆ ಅದರ ಮಹತ್ತ್ವವನ್ನು ಹಾಗೆ ಗುರುತಿಸಿದೆ.

ಭಾರತೀಯತೆಯ ಮೊದಲ ಲಕ್ಷಣವೇ ಅನ್ವೇಷಣೆ. ಎಲ್ಲದರ ಮೂಲದ ಹುಡುಕಾಟಕ್ಕೆ ಅದು ತನ್ನನ್ನು ಕೊಟ್ಟುಕೊಂಡಿದೆ. ಈ ಹುಡುಕಾಟದಲ್ಲಿ ಅದಕ್ಕೆ ಕಾಣಸಿಕ್ಕಿದ್ದು ಗೋವು. ಇಹಕ್ಕೂ ಪರಕ್ಕೂ ಗೋವು ಬೇಕೆಂಬುದನ್ನು ಅದು ಮನಗಂಡಿದೆ. ಅದಕ್ಕಾಗಿ ಆ ಸತ್ಯದರ್ಶನ, ಗೋವನ್ನು ಬದುಕಿನೊಂದಿಗೆ ಹಾಸುಹೊಕ್ಕಾಗಿ ಹೆಣೆಯಿತು. ಹಾಗಾಗಿ ಗೋವು ಅಧ್ಯಾತ್ಮದ ಸಾಧನವಾಯಿತು; ಭೌತಿಕದ ಜೀವಿಕೆಯಾಯಿತು.

ಆಧುನಿಕದ ಬದುಕು ಇದನ್ನೆಲ್ಲ ಮರೆತಿದೆ. ಅದು ಸಹಜ. ಮುನ್ನೋಟದ ಯಾನದಲ್ಲಿ ಹಿಂದಿನದ್ದು ಕಾಣದು. ಹಾಗೆಂದು ಅನುಭವವನ್ನು ನಿರಾಕರಿಸುವಂತಿಲ್ಲ. ಆದರೂ ಮರೆತಿದೆ. ಮರೆತದ್ದನ್ನು ನೆನಪಿಸಬೇಕಿದೆ. ಅದು ಸಮಾಜ ಚಿಂತಕರ ಪರಮ ಕರ್ತವ್ಯ.

ಅಂತದ್ದೊಂದು ಕಾರ್ಯಕ್ಕೆ ಸುದೀರ್ಘ ಇತಿಹಾಸವಿದೆ. ಗೋವನ್ನು ಉಳಿಸಿಕೊಳ್ಳಬೇಕೆನ್ನುವ ಜಾಗೃತಿ ಇಂದು ನಿನ್ನೆ ಮೂಡಿದ್ದಲ್ಲ. ಪರಕೀಯರ ಧಾಳಿ ಆರಂಭವಾದಂದಿನಿಂದಲೇ ಅದು ಆರಂಭಗೊಂಡಿದೆ. ಯಾಕೆಂದರೆ ಗೋವಿಗೆ ಅಪಾಯ ಆರಂಭವಾದದ್ದು ಅಂದಿನಿಂದಲೇ.

ಗೋಸಂರಕ್ಷಣೆಗಾಗಿ ಪ್ರಾಣಾಹುತಿಗಳೂ ನಡೆದಿವೆ ಎನ್ನುವುದು ಇತಿಹಾಸಪುಟಗಳು ಗುರುತಿಸಿವೆ. ಎಂಬಲ್ಲಿಗೆ ಅದರ ಮಹತ್ತ್ವ ಮತ್ತು ಅದಕ್ಕಿರುವ ಪ್ರಬಲ ಪ್ರತಿರೋಧ ಎಷ್ಟೆನ್ನುವುದು ಅರಿವಾಗುತ್ತದೆ.

ನಾವು ಬದುಕುತ್ತಿರುವ ಕಾಲಘಟ್ಟದಲ್ಲಿಯೂ ಈ ಎರಡೂ ಹಾಗೆಯೇ ಮುಂದುವರೆದಿದೆ. ಗೋವಿನ ಮಹತ್ತ್ವ ಹಿಂದೆಂದಿಗಿಂತಲೂ ಹೆಚ್ಚಾಗಿದೆ, ಹಾಗೆಯೇ ಪ್ರತಿರೋಧವೂ.

ವರ್ತಮಾನದಲ್ಲಿಯೂ ಗೋವಿಗಾಗಿ ಅನೇಕ ಸಂಸ್ಥೆಗಳಿಂದ, ಅಸಂಖ್ಯ ವ್ಯಕ್ತಿಗಳಿಂದ ಕಾರ್ಯ ನಡೆಯುತ್ತಿದೆ; ಅವರವರದ್ದೇ ಆದ ವಿಧಾನಗಳಲ್ಲಿ.

ಶ್ರೀರಾಮಚಂದ್ರಾಪುರಮಠ ಗೋಸಂರಕ್ಷಣೆಯ ಕಾರ್ಯವನ್ನು ಈ ಕಾಲಘಟ್ಟದ ತನ್ನ ಆದ್ಯತೆಯನ್ನಾಗಿ ಸ್ವೀಕರಿಸಿದೆ. ಆ ದಿಸೆಯಲ್ಲಿ ಹೆಜ್ಜೆಯಿಟ್ಟು ಕಾಮದುಘಾ ಯೋಜನೆಯನ್ನು ಕೈಗೊಂಡಿದೆ. ಸಂರಕ್ಷಣೆ – ಸಂವರ್ಧನೆ – ಸಂಶೋಧನೆ – ಸಂಬೋಧನೆ ಎನ್ನುವ ನಾಲ್ಕು ಆಯಾಮಗಳನ್ನು ಗುರುತಿಸಿಕೊಂಡಿದೆ. ಈ ನಿಟ್ಟಿನಲ್ಲಿ ಸಾಕಷ್ಟು ಸಾಧನೆಯನ್ನೂ ಮಾಡಿದೆ.

ಜನಜಾಗೃತಿಯ ಸಂಬೋಧನೆಯಲ್ಲಿ ಈಗಾಗಲೇ ಭಾರತೀಯ ಗೋಯಾತ್ರೆ, ಗೋಸಂಧ್ಯಾ, ಗೋಸಂಸತ್, ವಿಶ್ವಗೋಸಮ್ಮೇಳನ, ಕೋಟಿನೀರಾಜನ, ದೀಪಗೋಪುರ ಮುಂತಾದ ಹೆಜ್ಜೆಗುರುತುಗಳನ್ನು ಮೂಡಿಸಿವೆ. ಒಂದಿಷ್ಟು ಜಾಗೃತಿ ಇದರಿಂದ ಸಾಧಿತವಾಗಿದೆ.

ಈಗ ರಾಷ್ಟ್ರದ ಮೂಲೆ-ಮೂಲೆಗೆ ತಲುಪಿಸಲು ವಿಶ್ವಮಂಗಲ ಗೋ ಗ್ರಾಮ ಯಾತ್ರಾ ಸಂಘಟಿತಗೊಳ್ಳುತ್ತಿದೆ. ವಿರೋಧಿ ಸಂವತ್ಸರದ ವಿಜಯದಶಮಿಯಂದು ಆರಂಭಗೊಳ್ಳುವ ಯಾತ್ರೆ ಸಮಗ್ರ ಭಾರತದ ಆದ್ಯಂತ ಸಂಚರಿಸಲಿದೆ. ಯಾತ್ರೆ ಪೂರ್ಣಗೊಂಡಾಗ ಗೋಸಂರಕ್ಷಣೆಯ ಮೊದಲ ಹೆಜ್ಜೆ ಪೂರ್ಣಗೊಂಡಂತಾಗುತ್ತದೆ.

### ಹೂರಣ

ಗುರುವಾಣಿ
ಪ್ರಶ್ನೋತ್ತರ
ಮಾಸದ ಗೋವು: ಮಲೆನಾಡಗಿಡ್ಡ
ಸುದ್ದಿ ಸಮಾಚಾರ
ಸಮಾಜದ ಅವಿಭಾಜ್ಯ ಅಂಗವಾಗಿ ಗೋ ಸಮಾಜ

ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW
ಅಂತರಜಾಲ ತಾಣ: vishwagou.org
ಸಂಪರ್ಕ: govishva@gmail.com





ಹೃಷೀಕೇಶದ ಪರಮಾರ್ಥ ಆಶ್ರಮಕ್ಕೆ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ ಭೇಟಿ ನೀಡಿದ್ದರು. ಬರುವ ಸಂವತ್ಸರದಲ್ಲಿ ನಡೆಸಲಾಗುವ 'ವಿಶ್ವಮಂಗಲ ಗೋ ಗ್ರಾಮ ಯಾತ್ರೆ'ಯ ಸಿದ್ಧತಾ ಪ್ರವಾಸವನ್ನು ಶ್ರೀಗಳು ಕೈಗೊಂಡಿದ್ದಾರೆ. ಶ್ರೀ ಸ್ವಾಮೀಜಿಯವರೊಂದಿಗೆ ಆಶ್ರಮದ ಶ್ರೀ ಚಿದಾನಂದ ಸರಸ್ವತೀ ಮುನೀಜಿ ಮಹಾರಾಜ್ ಮತ್ತವರ ಶಿಷ್ಯ ಸಮೂಹ ಇದೆ.

**ಯಾತ್ರೆಯ ಕುರಿತು:**

ಯಾತ್ರೆ ಸಂತಮಂಡಲದ ಬೆಂಬಲದಲ್ಲಿ ನಡೆಯಲಿದೆ.

ಯಾತ್ರೆಯ ಪ್ರಸ್ತಾವಕರು: ಶ್ರೀ ಶ್ರೀ ರವಿಶಂಕರ ಗುರೂಜಿ, ಶ್ರೀ ರಾಮದೇವಜೀ ಬಾಬಾ, ಪೂಜ್ಯಾ ಅಮೃತಾನಂದಮಯೀಜೀ, ಪೂಜ್ಯ ಆಚಾರ್ಯ ವಿದ್ಯಾಸಾಗರಜೀ ಮಹಾರಾಜ್, ಪೂಜ್ಯ ಆಚಾರ್ಯ ಮಹಾಪ್ರಾಜ್ಞಜೀ, ಪೂಜ್ಯ ರತ್ನಸುಂದರ ಸುರೇಶ್ವರಜೀ, ಪೂಜ್ಯ ದಯಾನಂದ ಸರಸ್ವತೀಜೀ

- ಯಾತ್ರಾ ಸಮಯ ೧೦೮ ದಿನಗಳು
- ೪೦೦ ಸ್ಥಳಗಳಲ್ಲಿ ಸಭಾಕಾರ್ಯಕ್ರಮಗಳು
- ಹಳ್ಳಿಗಳಿಂದ ಮುಖ್ಯಕೇಂದ್ರಗಳಿಗೆ ಉಪಯಾತ್ರೆಗಳು
- ಗೋಹತ್ಯಾ ನಿಷೇಧ ಕಾನೂನಿಗೆ ಸಹಿ ಸಂಗ್ರಹ
- ಮೆರವಣಿಗೆಗಳು
- ಗೋಪೂಜೆಗಳು
- ಸಂತರು, ವಿಜ್ಞಾನಿಗಳಿಂದ ಗೋಸಂದೇಶ

ಹೀಗೆ ಯಾತ್ರೆ ಭಾರತದೆಲ್ಲೆಡೆ ಸಂಚರಿಸಲಿದೆ. ಭಾರತದ ಪ್ರತಿ ಮನೆಯನ್ನು ಗೋ ಅಭಯಧಾಮವನ್ನಾಗಿಸಲು ಪ್ರಯತ್ನಿಸಲಿದೆ.

ನಮ್ಮ ಕಾಲಘಟ್ಟದ ಈ ಮಹತ್ವಾಕಾಂಕ್ಷಿ ಯಾತ್ರೆಗೆ ನಮ್ಮನ್ನು ನಾವೇ ತೊಡಗಿಸಿಕೊಳ್ಳೋಣ.

**- ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ, ಶ್ರೀ ರಾಮಚಂದ್ರಾಪುರ ಮಠ**

(ಕೃಪೆ : ಧರ್ಮಭಾರತೀ)

# ಪ್ರಶ್ನೋತ್ತರ

ಪ್ರ: ಇವತ್ತು ಒಂದು ಜತೆ ಎತ್ತು ಕೊಳ್ಳುವುದು ಸಾಧಾರಣ ರೈತನಿಗೆ ಅಸಾಧ್ಯವಾಗಿದೆ. ಹೀಗೇಕೆ?

ಉ: ಇವತ್ತು ಹಸುಗಳಲ್ಲಿ ಸ್ವದೇಶಿ ಹಾಗೂ ವಿದೇಶಿ ತಳಿ ಎರಡನ್ನೂ ಕಾಣಬಹುದು. ಆದರೆ ಎತ್ತುಗಳಲ್ಲಿ ಸ್ವದೇಶಿ ತಳಿಗಳನ್ನು ಮಾತ್ರ ಕಾಣಬಹುದು. ಕಾರಣ ವಿದೇಶಿ ತಳಿ ಹಸುಗಳ ಗಂಡು ಕರುಗಳಿಗೆ ಭುಜ (ಇಣಿ) ಇರುವುದಿಲ್ಲ. ಆದ್ದರಿಂದ ನೊಗ ಜಾರಿ ಹೋಗುತ್ತದೆ. ಅಲ್ಲದೆ ದೇಸೀ ತಳಿ ಎತ್ತುಗಳಂತೆ ರೈತನ ಮನಸ್ಸನ್ನು ಅರಿತು ದುಡಿಯುವ ಗುಣ ಅವಕ್ಕಿಲ್ಲ. ಆದ್ದರಿಂದ ವಿದೇಶಿ ತಳಿ ಎತ್ತುಗಳನ್ನು ಯಾರೂ ಕೃಷಿಯಲ್ಲಿ ಬಳಸುವುದಿಲ್ಲ. ದೇಸೀ ತಳಿ ಹಸುಗಳು ಕಡಿಮೆ ಹಾಲು ಕೊಡುತ್ತವೆ ಎಂಬ ಕಾರಣಕ್ಕಾಗಿ ಅವನ್ನು ಕಸಾಯಿಖಾನೆಗಳಿಗೆ ಹೊಡೆಯುತ್ತಾ ಹೋದರೆ, ಗಂಡು ಕರುಗಳು ಎಲ್ಲಿಂದ ಬರಬೇಕು? ಹೋರಿಗಳು, ಎತ್ತುಗಳು ಎಲ್ಲಿಂದ ಬರಬೇಕು? ಆದ್ದರಿಂದಲೇ ಎತ್ತುಗಳು ದುಬಾರಿಯಾಗುತ್ತಿವೆ.

ಪ್ರ: ಆಧುನಿಕ ಭಾರತದ ಸಾರಿಗೆ ವ್ಯವಸ್ಥೆಯಲ್ಲಿ ಎತ್ತಿನ ಗಾಡಿಗಳಿಗೆ ಏನಾದರೂ ಪ್ರಾಮುಖ್ಯ ಇದೆಯೆ?

ಉ: ಖಂಡಿತಾ ಇದೆ. ಭಾರತದ ಯೋಜನಾ ಆಯೋಗದ ಒಂದು ಅಧ್ಯಯನ ಇದನ್ನು ತಿಳಿಸುತ್ತದೆ. ಭಾರತೀಯ ರೈಲ್ವೆ, ಪ್ರಪಂಚದಲ್ಲೇ ಅತ್ಯಂತ ದೊಡ್ಡದು. ಒಂದು ವರ್ಷಕ್ಕೆ ಅದು ಎಷ್ಟು ಸರಕುಗಳನ್ನು ಸಾಗಾಟ ಮಾಡುತ್ತದೋ, ಅದರ ೫ ಪಟ್ಟು ಹೆಚ್ಚು ಸರಕುಗಳನ್ನು ಎತ್ತಿನ ಗಾಡಿಗಳು ಸಾಗಿಸುತ್ತವೆ. ಭಾರತೀಯ ರೈಲ್ವೆ ಒಂದು ವರ್ಷಕ್ಕೆ ಎಷ್ಟು ಪ್ರಾಯಾಣಿಕರನ್ನು ಸಾಗಿಸುತ್ತದೋ ಅದರ ೪ ಪಟ್ಟು ಹೆಚ್ಚು ಪ್ರಯಾಣಿಕರನ್ನು ಎತ್ತಿನ ಗಾಡಿಗಳು ಸಾಗಿಸುತ್ತವೆ. ಡೀಸೆಲ್ ಕುಡಿಯದೆ, ಎತ್ತಿನ ಗಾಡಿಗಳು ಈ ಅಗಾಧ ಕೆಲಸ ಮಾಡುವುದರಿಂದ ಅವು ವರ್ಷಕ್ಕೆ ಒಂದು ಲಕ್ಷ ಕೋಟಿ ರೂಪಾಯಿಗಳಷ್ಟು ತೈಲ ಉಳಿತಾಯ ಮಾಡುತ್ತವೆ.

**- ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

ಮಾಸದ ಗೋವು

# ಮಲೆನಾಡು ಗಿಡ್ಡ – ವೈಶಿಷ್ಟ್ಯವಾಗಿ ಅತೀ ದೊಡ್ಡ

ಸಾಮಾನ್ಯವಾಗಿ ಮಲೆನಾಡು, ಕರಾವಳಿ ಪ್ರದೇಶಗಳಲ್ಲಿನ ಅನೇಕ ಗಿಡಮರಬಳ್ಳಿಗಳು ಹೆಚ್ಚಿನ ಔಷಧೀಯ ಗುಣಗಳನ್ನು ಹೊಂದಿವೆಯೆಂದು ಅನೇಕ ಆಯುರ್ವೇದೀಯ ಗ್ರಂಥಗಳಲ್ಲಿ ಉಲ್ಲೇಖಿತವಾಗಿದೆ. ಹಾಗಾಗಿ ಇವುಗಳನ್ನು ತಿಂದ ಈ ಗೋವುಗಳ ಹಾಲು, ಮೂತ್ರ, ಗೋಮಯ ಎಲ್ಲವೂ ಔಷಧೀಯವಾಗಿ ಅತಿ ಶ್ರೇಷ್ಠವಾಗಿವೆ

ಮಲೆನಾಡು ಗಿಡ್ಡ ತಳಿಯ ದನಗಳು ಕೇವಲ ದನವಾಗಿರದೇ, ಧನ ಅನ್ನುವುದನ್ನು ಅನೇಕರು ಅರ್ಥೈಸಿಕೊಂಡಿದ್ದಾರೆ. ಈ ಹಲವು ವಿಷಯಗಳನ್ನು ಹಿಂದಿನ ಅಂಕಣದಲ್ಲಿ ಅರಿತಿದ್ದರೂ, ಅದೊಂದು ಮಾಹಿತಿಗಳ ಆಗರ. ಯಾವ ರೀತಿ ಸಮುದ್ರದಿಂದ ಮೊಗೆದಷ್ಟೂ ಅಲ್ಲಿರುವ ಜಲಸಂಪತ್ತು ಬತ್ತದೋ, ಅದೇ ರೀತಿ ನಮ್ಮ ಹೆಮ್ಮೆಯ ಮಲೆನಾಡು ಗಿಡ್ಡದ ಯಾವುದೇ ಅಂಶ ಅರಿತಷ್ಟೂ ಮುಗಿಯದು. ಹಾಗಾಗಿ ಈ ಮಾಸ ಇನ್ನಷ್ಟು ಹೆಚ್ಚು ಮಾಹಿತಿಗಳನ್ನು ಆ ಮಹಾಮಾತೆಯ ಬಗ್ಗೆ ಅರಿಯುವ ಪ್ರಯತ್ನ ಮಾಡುವುದರ ಜೊತೆಗೇ ಆ ತಳಿಯ ಗೋವಿನೊಂದಿಗೆ ಹಲವಾರು ವರ್ಷಗಳಿಂದ ಒಂದಾಗಿರುವ ಕೆಲವು ಗೋಪ್ರೇಮಿಗಳ ಅನುಭವದ ಗಾಥೆಯನ್ನೂ ತಿಳಿಯೋಣ.



ಮಲೆನಾಡು ಗಿಡ್ಡ, ಕರ್ನಾಟಕ

ವಿಜ್ಞಾನಿಗಳು ಭಾರತೀಯ ಗೋತಳಿಗಳನ್ನು ಅವುಗಳ ಗುಣಲಕ್ಷಣಗಳಿಗನುಸಾರವಾಗಿ ಹಾಲು, ಕೆಲಸಗಾರ ಹಾಗೂ ದ್ವಿ ಉದ್ದೇಶದ ತಳಿಗಳೆಂದು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. ಅದರಲ್ಲಿ ಮಲೆನಾಡು ಗಿಡ್ಡ ತಳಿ ಕೆಲಸಗಾರ ವಿಭಾಗಕ್ಕೆ ಬರುತ್ತದೆ. ಗಾತ್ರದಲ್ಲಿ ಕಿರಿದಾಗಿದ್ದರೂ, ಅತೀ ಹೆಚ್ಚು ರೋಗ ನಿರೋಧಕ ಶಕ್ತಿ ಹೊಂದಿರುವ ಈ ತಳಿಯ ಗೋವುಗಳು ಕಡಿಮೆ ಆಹಾರ ತಿಂದು, ತನ್ನ ಸಾಮರ್ಥ್ಯಕ್ಕಿಂತ ಹೆಚ್ಚು ಹಾಗೂ ಪೌಷ್ಟಿಕಾಂಶಯುಕ್ತ ಹಾಲನ್ನು ನೀಡುತ್ತವೆ. ದಿನದಲ್ಲಿ ಹೆಚ್ಚಿನಕಾಲ (ಬೆಳಗ್ಗೆಯಿಂದ ಮುಸ್ಸಂಜೆಯವರೆಗೂ) ಗುಡ್ಡ ಕಾಡುಗಳಲ್ಲಿ ಅಡ್ಡಾಡುತ್ತಾ ಎಲೆ, ಹುಲ್ಲು, ಚಿಗುರುಗಳನ್ನು ತಿನ್ನುತ್ತಿರುತ್ತವೆ. ಸಾಮಾನ್ಯವಾಗಿ ಮಲೆನಾಡು, ಕರಾವಳಿ ಪ್ರದೇಶಗಳಲ್ಲಿನ ಅನೇಕ ಗಿಡಮರಬಳ್ಳಿಗಳು ಹೆಚ್ಚಿನ ಔಷಧೀಯ ಗುಣಗಳನ್ನು ಹೊಂದಿವೆಯೆಂದು ಅನೇಕ ಆಯುರ್ವೇದೀಯ ಗ್ರಂಥಗಳಲ್ಲಿ ಉಲ್ಲೇಖಿತವಾಗಿದೆ. ಹಾಗಾಗಿ ಇವುಗಳನ್ನು ತಿಂದ ಈ ಗೋವುಗಳ ಹಾಲು, ಮೂತ್ರ, ಗೋಮಯ ಎಲ್ಲವೂ ಔಷಧೀಯವಾಗಿ ಅತಿ ಶ್ರೇಷ್ಠವಾಗಿವೆ. ಆದರೆ ಇಂದು ಪ್ರತಿಯೊಂದು ಸುಲಭವಾಗಿಯೇ ಆಗಬೇಕು ಎನ್ನುವ ಮನೋಧರ್ಮದ ಕಾರಣ ತಯಾರಿಸಲು ಕಷ್ಟವಾದ ನಾಟಿ ಔಷಧಿಗಳ ಬಳಕೆ ಅತ್ಯಂತ ಕಡಿಮೆಯಾಗಿದೆ. ಆದರೂ ಕೆಲವೊಂದು ಹಳೆತಲೆಮಾರಿನವರು ಮಲೆನಾಡುಗಿಡ್ಡದ ಹಾಲು, ಘೃತ (ಹಳೆಯ ತುಪ್ಪ), ಗೋಮಯ, ಗೋಮೂತ್ರ ಬಳಸಿ ಅನೇಕ ಮಾರಕ ಕಾಯಿಲೆಗಳಿಗೆ ಔಷಧಿ ಮಾಡಿ ಗುಣಮುಖರನ್ನಾಗಿಸಿದ ತಮ್ಮ ಅನುಭವದ ಬುತ್ತಿಯನ್ನು ಬಿಚ್ಚುತ್ತಾರೆ.

ಮಲೆನಾಡು ಗಿಡ್ಡ ತಳಿಗಳ ಗೋಮೂತ್ರ ಸೌಮ್ಯ ಗುಣ ಹೊಂದಿದ್ದು, ಉತ್ತರ ಭಾರತದ ತಳಿಗಳ ಗೋಮೂತ್ರ ತೀಕ್ಷ್ಣ ಗುಣ ಹೊಂದಿದ್ದರೂ, ಔಷಧೀಯವಾಗಿ ಎರಡರ ಗುಣಧರ್ಮ ಒಂದೇ ಆಗಿದೆ. ಆದರೆ ಈ ತಳಿಯ ಗೋವುಗಳು ಹೆಚ್ಚಿನ ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತವೆ. ಸಣ್ಣ ಗಾತ್ರ ಹಾಗೂ ಶಕ್ತಿಯುತ ಕಾಲುಗಳನ್ನು ಹೊಂದಿರುವುದರಿಂದ ಆರು ಅಡಿಗಿಂತಲೂ ಹೆಚ್ಚಿನ ಎತ್ತರದ ಬೇಲಿ / ತಡೆಗೋಡೆಗಳನ್ನು ಸುಲಭವಾಗಿ ಹಾರುವ ಸಾಮರ್ಥ್ಯ ಹೊಂದಿವೆ. ಈ ತಳಿಯ ಕೆಲವು ಗೋವುಗಳು ಪ್ರತಿವರ್ಷ (ಅಂದರೆ ಸಾಮಾನ್ಯವಾಗಿ ೧೪-೧೬ ಕರುಗಳು) ಕರು ಹಾಕಿದ ಉದಾಹರಣೆಗಳಿವೆ ಎಂದು ಹಲವಾರು ವರ್ಷಗಳಿಂದ ಈ ತಳಿಗಳನ್ನು ಸಾಕಿದ ಕರಾವಳಿ ಪ್ರದೇಶದ ಕೆಲವು ಹಿರಿತಲೆಗಳು ಹೇಳುತ್ತವೆ. ಇವುಗಳ ಸಾಮರ್ಥ್ಯಕ್ಕೊಂದು



ಸಣ್ಣ ಉದಾಹರಣೆ ಎಂದರೆ ಇವು ಗರ್ಭ ಧರಿಸಿ ದಿನ ತುಂಬಿದರೂ ಸಹಜವಾಗಿ ಗುಡ್ಡ ಮೇಡುಗಳಲ್ಲಿ ಮೇಯಲು ಹೋಗುತ್ತವೆ. ಆ ಸಂದರ್ಭದಲ್ಲಿ ಅಕಸ್ಮಾತ್ ನೋವು ಬಂದು ಕರು ಹಾಕಿದರೂ ಕೆಲವೇ ಹೊತ್ತಿನಲ್ಲಿ ತಾಯಿ ದನದೊಡನೆ ಅದರ ಕರು ಕೂಡ ತಮ್ಮನ್ನು ಸಾಕಿದ ಮನೆಗೆ ನಡೆದುಕೊಂಡು ಬಂದ ಅನೇಕ ಉದಾಹರಣೆಗಳಿವೆ.

ಪುಣ್ಯಕೋಟಿ ನಗರದ (ಬಂಟ್ವಾಳ ತಾಲೂಕಿನ

ಕೈರಂಗಳದಲ್ಲಿರುವ ಶ್ರೀರಾಮಚಂದ್ರಾಪುರಮಠದ ಮಲೆನಾಡು ಗಿಡ್ಡ ಸಂವರ್ಧನಾ ಕೇಂದ್ರ) ಸಮೀಪ ೪೦-೫೦ ವರ್ಷಗಳ ಹಿಂದೆ, ಕಣ್ಣು ಕಾಣದ ಆದರೆ ಶಾರೀರಿಕವಾಗಿ ಗಟ್ಟಿಯಾಗಿದ್ದ, ಈ ತಳಿಯ ಗೋವೊಂದು ನಿತ್ಯದಂತೆ ಗುಡ್ಡಕ್ಕೆ ಮೇಯಲು ಹೋದಾಗ ಅಲ್ಲಿ ಕರು ಹಾಕಿದ್ದು ಮಾತ್ರವಲ್ಲದೇ, ಆ ಕರುವನ್ನು ಕರಕೊಂಡು ತನ್ನನ್ನು ಸಾಕಿದ ಮನೆಗೆ ಬಂದಿತ್ತು, ಎಂದು ೫೦-೬೦ ವರ್ಷಗಳಿಂದ ತನ್ನ ಸ್ವಂತ ಮಕ್ಕಳ ರೀತಿಯಲ್ಲಿಯೇ ಗೋವುಗಳನ್ನು ಇಂದಿಗೂ ಸಾಕುತ್ತಿರುವ ಶ್ರೀಮತಿ ಪಾರ್ವತಿ ತಿಮ್ಮಪ್ಪಯ್ಯ ಭಟ್ಟರು ತಮ್ಮ ಅನುಭವದಲ್ಲಿ ಹೇಳುತ್ತಾರೆ. ಮಾತ್ರವಲ್ಲ ತನ್ನ ತವರು ಮನೆಯಲ್ಲಿ



ಕೆಲವಾರು ವರ್ಷಗಳ ಹಿಂದೆ ಇಪ್ಪತ್ತೈದು ಕರು ಹಾಕಿದ ಊರ ದನ (ಮಲೆನಾಡು ಗಿಡ್ಡ) ಇತ್ತು ಎನ್ನುವುದನ್ನು ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತಾರೆ.

ಸಾಮಾನ್ಯವಾಗಿ ಗೋವಿನ ಜೀವಿತಾವಧಿ ಸರಾಸರಿ ೨೦ ವರ್ಷಗಳು. ಕಾಸರಗೋಡು ತಾಲೂಕಿನ ಸುಂಕದಕಟ್ಟೆ ಸಮೀಪದ ಅರಂತಾಡಿ ತಿಮ್ಮಪ್ಪ ಭಟ್ಟರಲ್ಲಿ (ಗೋಪ್ರೇಮಿ ಕೃಷಿಕರು) ಇಪ್ಪತ್ತೆಂಟು ವರ್ಷ ಪ್ರಾಯದ ಮಲೆನಾಡು ಗಿಡ್ಡ ತಳಿಯ ಸುಂದರವಾದ ಕಪ್ಪು ವರ್ಣದ ಇನ್ನೂ ಗಟ್ಟಿಮುಟ್ಟಾಗಿಯೇ ಇರುವ ಜ್ಯೋತಿ ಹೆಸರಿನ ಗೋವು ಇದೆಯೆನ್ನುವುದು ಆಶ್ಚರ್ಯಕರವಾದರೂ ವಿಶೇಷ ಸಂಗತಿಯೇ ಸರಿ. ಯಾವುದೇ ರೀತಿಯ ತಳಿ ಸಂಕರ ಮಾಡದೇ ಹನ್ನೆರಡು ಕರು ಹಾಕಿದ ಆ ಜ್ಯೋತಿ ಇಪ್ಪತ್ತನಾಲ್ಕು ವರ್ಷಗಳ ಕಾಲ ಹಾಲು ನೀಡಿದೆ (ದಿನವೊಂದಕ್ಕೆ ಎರಡು ಲೀ.ನಂತೆ). ಇಂದಿಗೂ ಬೆಳಗ್ಗೆಯಿಂದ ಸಂಜೆಯವರೆಗೆ ಉಳಿದ ಗೋವುಗಳ ಜೊತೆ ಸಹಜವಾಗಿ ಗುಡ್ಡಗಾಡುಗಳಲ್ಲಿ ಮೇಯಲು ಹೋಗುವ ಜ್ಯೋತಿಯ ಹಲ್ಲು ಇಂದಿಗೂ ಗಟ್ಟಿಯಾಗಿಯೇ ಇದೆ ಎಂದು ತಿಮ್ಮಪ್ಪ ಭಟ್ಟರು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಅವರ ಪತ್ನಿ, ಮಕ್ಕಳು, ಸೊಸೆಯಂದಿರು ಎಲ್ಲರೂ ಆ ಜ್ಯೋತಿಯನ್ನು ಮನೆಮಗಳ ರೀತಿ ಪ್ರೀತಿಯಿಂದ ನೋಡುತ್ತಾರೆ. ಈ ರೀತಿ ಮೂವ್ವತ್ತು ವರ್ಷಗಳವರೆಗೆ ಬದುಕಿದ ಈ ಊರ ತಳಿಯ ಅನೇಕ ಉದಾಹರಣೆಗಳು ಕರಾವಳಿ ಪ್ರದೇಶದ ಹಳ್ಳಿಪ್ರದೇಶದಲ್ಲಿರುವ ಹಿರಿಯ ವ್ಯಕ್ತಿಗಳಲ್ಲಿ ಊರ ತಳಿಯ (ಮಲೆನಾಡು ಗಿಡ್ಡ) ವಿಶೇಷತೆ ಕುರಿತು ಮಾತುಕತೆ ನಡೆಸಿದಾಗ ಉಲ್ಲೇಖವಾಗಿದೆ.

ಹೀಗೆ ವೈಶಿಷ್ಟ್ಯತೆಗಳಲ್ಲಿ, ಔಷಧೀಯ ಗುಣಗಳಲ್ಲಿ, ಉಪಯೋಗದಲ್ಲಿ ಈ ರೀತಿ ಯಾವ ಗುಣವಾದರೂ ತಮ್ಮ ಭಾರತೀಯ ತಳಿಗಳಲ್ಲಿ ಕಿರೀಟಪ್ರಾಯವಾಗಿ ಮಲೆನಾಡು ಗಿಡ್ಡ ನಿಲ್ಲುತ್ತದೆ. ಕರಾವಳಿ, ಮಲೆನಾಡು ಪ್ರದೇಶದಲ್ಲಿ ಇಂದಿಗೂ ಆಧುನಿಕತೆ ತಲುಪದ ಅನೇಕ ಕಡೆ, ಗೋವುಗಳು, ಹೋರಿಗಳೂ ಕಾಣಲು ಸಿಗುತ್ತವೆ. ಆಧುನಿಕ ಶಿಕ್ಷಣ / ಚಿಂತನೆ ಹೆಚ್ಚಾದ ಹಾಗೆ ಈ ತಳಿಗಳ ಸಂಕರವೂ ಹೆಚ್ಚಾಗಿ ಶುದ್ಧತಳಿಗಳ ಸಂಖ್ಯೆ ಪಾತಾಳಕ್ಕಿಳಿದಿರುವುದು ಚಿಂತಿಸಬೇಕಾದ ವಿಚಾರವೇ ಆಗಿದೆ. ಕರಾವಳಿ, ಮಲೆನಾಡು ಪ್ರದೇಶದ ಜನಜೀವನದ ಅವಿಭಾಜ್ಯ ಅಂಗವಾಗಿ ಹತ್ತು-ಹಲವು ವರ್ಷಗಳಿಂದ ಇರುವ ಈ ಮಲೆನಾಡು ಗಿಡ್ಡ ತಳಿ ಭಾರತ ಸರ್ಕಾರದ ಗೋತಳಿಗಳ ಪಟ್ಟಿಯಲ್ಲಿ ಇನ್ನೂ ಸೇರ್ಪಡೆಯಾಗಿಲ್ಲ ಎನ್ನುವುದು ಖೇದದ ವಿಚಾರ.

**ಮೂಲ : ಮಲೆನಾಡ ಪ್ರದೇಶ – ಶಿವಮೊಗ್ಗ,**
**ಉತ್ತರ ಕನ್ನಡ, ದಕ್ಷಿಣ ಕನ್ನಡ – ಕರ್ನಾಟಕ**
**ವಿಭಾಗ : ಕೆಲಸಗಾರ ತಳಿ**
**ಸಣ್ಣ ಗಾತ್ರದ ಹೆಚ್ಚಿನೆಲ್ಲಾ ರೋಗಗಳಿಗೆ ನಿರೋಧಕ ಶಕ್ತಿ ಹೊಂದಿದೆ. ಕಡಿಮೆ ಆಹಾರ ತಿಂದು ಹೆಚ್ಚು ಪೌಷ್ಠಿಕಾಂಶಯುಕ್ತ ಹಾಲು ನೀಡುತ್ತವೆ.**
**ಬಣ್ಣ : ಕೆಂಪು, ಕಂದು, ಕಪ್ಪು, ಬಿಳಿ ಹಾಗೂ ಕಪಿಲಾ ಬಣ್ಣದಲ್ಲಿರುತ್ತದೆ.**
**ಮುಖ : ಸಪೂರವಾಗಿ ಉದ್ದ**
**ಕೊಂಬು : ಸಣ್ಣದು**
**ಬಾಲ : ಉದ್ದ**

ಕರಾವಳಿ ಮಲೆನಾಡು ಪ್ರದೇಶದ ಗೋಪ್ರೇಮಿಗಳು ಮಾತ್ರವಲ್ಲದೇ, ಒಂದಲ್ಲ ಒಂದು ರೀತಿಯಲ್ಲಿ (ಎರೆಗೊಬ್ಬರ, ಕೀಟನಿಯಂತ್ರಕ, ಹಾಲು, ತುಪ್ಪ ಇತ್ಯಾದಿ ಉತ್ಪನ್ನಗಳು) ಗೋವಿನ ಉಪಯೋಗ ಪಡೆಯುತ್ತಿರುವ ಪ್ರತಿಯೊಬ್ಬರೂ ಮಲೆನಾಡು ಗಿಡ್ಡ ಸಂರಕ್ಷಣೆ, ಸಂವರ್ಧನೆ ಬಗ್ಗೆ ಚಿಂತನೆ ಮಾಡಲು ಇದು ಖಂಡಿತವಾಗಿಯೂ ಸಕಾಲ. ಈಗಾದರೂ ನಾವು ಎಚ್ಚೆತ್ತುಕೊಂಡು ಈ ಬಗ್ಗೆ ಯೋಚಿಸದಿದ್ದಲ್ಲಿ ಕೋಹಿನೂರು ವಜ್ರದಂತಹ ಅನೇಕ ಅಮೂಲ್ಯ ವಸ್ತುಗಳನ್ನು ಕಳಕೊಂಡ ನಾವು ಅತ್ಯಪೂರ್ವ ಮಲೆನಾಡು ಗಿಡ್ಡವನ್ನೂ ಕಳಕೊಳ್ಳಬೇಕಾಗುತ್ತದೆ. ಬನ್ನಿ! ಹಾಗಾಗದಂತೆ ನಾವು ನೀವೆಲ್ಲ ಇಂದೇ ಕೈಜೋಡಿಸೋಣ!!

**– ಸದಾಶಿವ ಮೋಂತಿಮಾರು**

**'ಹಸುಳೆ, ಹಸು ಮತ್ತು ಪ್ರಕೃತಿ ದೇವರಿಗೆ ಸಮಾನ, ಅವುಗಳನ್ನು ಪ್ರೀತಿಸೋಣ, ಪೂಜಿಸೋಣ ಮತ್ತು ರಕ್ಷಿಸೋಣ'**
**– ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳು, ಶ್ರೀರಾಮಚಂದ್ರಾಪುರಮಠ**

# ಸುದ್ದಿ ಸಮಾಚಾರ

**ಭೂಮಾತೆ ಮತ್ತು ಗೋಮಾತೆ ನಮಗೆ ಅತಿ ಮುಖ್ಯ. ಗೋಮಾತೆಯ ಬಗ್ಗೆ ಅರಿವು ಮೂಡಿಸುವ ದಿಸೆಯಲ್ಲಿ ಗೋವಿಶ್ವ ಪ್ರಯತ್ನಿಸುತ್ತಿದೆ. ಜಗತ್ತಿನ ಮೂಲೆ ಮೂಲೆಯಿಂದ ಗೋ ಸಂಬಂಧಿ ಸುದ್ದಿ ಸಮಾಚಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗುತ್ತಿದೆ.**

## ಸೆಗಣಿಯಿಂದ ನಡೆಯುವ ಗಡಿಯಾರ

ಇನ್ನು ಮೇಲೆ ನೀವು ಯಾರ ಗಡಿಯಾರವನ್ನೂ ನೋಡಿ ಅದೇನು ಸೆಗಣಿ ಗಡಿಯಾರ ಎಂದು ಹೀಯಾಳಿಸುವಂತಿಲ್ಲ. ಯಾಕೆಂದರೆ ಈಗ ಸೆಗಣಿಯಿಂದಲೇ ನಡೆಯುವ ಗಡಿಯಾರವನ್ನು ಸಿದ್ಧಪಡಿಸಲಾಗಿದೆ.

ಮೈಸೂರು ದಸರಾದಲ್ಲಿ ಇದೇ ಮೊದಲ ಬಾರಿಗೆ ಆಯೋಜಿಸಲಾಗಿದ್ದ ರೈತ ದಸರಾದಲ್ಲಿ ಪ್ರದರ್ಶನಕ್ಕೆ ಇಟ್ಟಿದ್ದ ಈ ಗಂಜಳ ಗಡಿಯಾರ ಎಲ್ಲರ ಕುತೂಹಲದ ವಸ್ತುವಾಗಿತ್ತು. ಈ ಗಡಿಯಾರಕ್ಕೆ ಬ್ಯಾಟರಿಯೇ ಬೇಕಾಗಿಲ್ಲ. ಇದಕ್ಕೆ ಕೇವಲ ಗೋಮೂತ್ರ, ಹುಳಿ ಮಜ್ಜಿಗೆ ಇದ್ದರೆ ಸಾಕು. ನಾಲ್ಕಾರು ತಿಂಗಳು ಈ ಗಡಿಯಾರದಲ್ಲಿ ವೇಳೆ ನೋಡಿಕೊಳ್ಳಬಹುದು. ಈ ನವೀನ ಗಡಿಯಾರಗಳ ಹೆಸರೇನು ಗೊತ್ತೆ? ಗೋಮೂತ್ರ ಗಡಿಯರಾರ, ಮಜ್ಜಿಗೆ ಗಡಿಯಾರ. ಇದಷ್ಟೇ ಅಲ್ಲ. ೧.೫ ವೋಲ್ಟ್‌ನ ಬಲ್ಬ್‌ಗಳನ್ನೂ ಉರಿಸಬಹುದು. ಶ್ರೀ ರಾಮಚಂದ್ರಾಪುರ ಮಠದ ಸಹಯೋಗದಲ್ಲಿ ತಯಾರಿಸಿರುವ ಈ ಗೋಮೂತ್ರಗಳ ಗಡಿಯಾರಗಳನ್ನು ಮೈಸೂರು ರೈತ ದಸರಾದಲ್ಲಿ ಪ್ರದರ್ಶನಕ್ಕೆ ಇಡಲಾಗಿತ್ತು.



ಸಗಣಿಯೋ ಗಂಜಲವೋ ಅಥವಾ ಮಜ್ಜಿಗೆ ತುಂಬಿದ ಬಾಟಲಿಗಳಲ್ಲಿ ವಿದ್ಯುತ್ ತಂತಿಯನ್ನು ಬಿಗಿದ ತೆಳುವಾದ ತಾಮ್ರ ಮತ್ತು ಸತುವಿನ (ಝಿಂಕ್) ತುಂಡುಗಳನ್ನು ಅಕ್ಕಪಕ್ಕದಲ್ಲಿ ಇಳಿಬಿಟ್ಟು ವೈಯರ್‌ನ ಮತ್ತೊಂದು ತುದಿಯನ್ನು ಸಾಮಾನ್ಯ ಗಡಿಯಾರಕ್ಕೆ ಜೋಡಿಸಬೇಕು. ತಾಮ್ರ ಮತ್ತು ಸತುಗಳು ಒಂದು ಧನ ಮತ್ತೊಂದು ಋಣ ವಿದ್ಯುತ್ ವಾಹಕಗಳಾಗಿ ಕೆಲಸ ಮಾಡುತ್ತವೆ. ನಾಲ್ಕೈದು ತಿಂಗಳು ಗಡಿಯಾರ ಚಲಿಸುತ್ತದೆ.

ನಂತರ ಲೋಹದ ತುಂಡುಗಳು, ಗೋಮೂತ್ರ ಮತ್ತು ಸೆಗಣಿಯನ್ನು ಬದಲಾಯಿಸಬೇಕು. ಮಜ್ಜಿಗೆ ಗಡಿಯಾರದಲ್ಲಿ ಪ್ರತಿ ದಿವಸ ಮಜ್ಜಿಗೆ ಬದಲಾಯಿಸಬೇಕು. ಕೊಟ್ಟಿಗೆ ಬೆಳಗಲು ಗೋಮೂತ್ರದ ವಿದ್ಯುತ್ ದೀಪವನ್ನೆ ಬಳಸಬಹುದು ಎನ್ನುತ್ತಾರೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ದಾರದಹಳ್ಳಿಯ ಹಿರಿಯ ಪಶುವೈದ್ಯಕೀಯ ಪರೀಕ್ಷಕ ಕ.ದಾ. ಕೃಷ್ಣರಾಜು. ರೈತರು ಈ ಗಡಿಯಾರವನ್ನು ತಯಾರಿಸಿಕೊಂಡರೆ ವಿದ್ಯುತ್ ಉಳಿಸಬಹುದು. ಹೆಚ್ಚಿನ ಮಾಹಿತಿ ಬೇಕಿದ್ದರೆ ದೂರವಾಣಿ ಸಂಖ್ಯೆ ೯೪೪೮೦೭೩೭೧೧ ಸಂಪರ್ಕಿಸಬಹುದು.

(ಕೃಪೆ: ಪ್ರಜಾವಾಣಿ)

## ಗಬ್ಬದ ದನ ಕೊಂದಿದ್ದಕ್ಕೆ ಒಂದು ವರ್ಷ ಶಿಕ್ಷೆ

ತನ್ನ ಬೇಕರಿಗೆ ಬಂದು ತಿನಿಸುಗಳನ್ನು ತಿಂದುಬಿಟ್ಟಿತು ಎಂಬ ಕಾರಣಕ್ಕೆ ಗಬ್ಬದ ದನವನ್ನೇ ಕೊಂದು ಹಾಕಿದ ವ್ಯಕ್ತಿಗೆ ದೆಹಲಿ ಹೈಕೋರ್ಟ್ ಒಂದು ವರ್ಷ ಜೈಲು ಶಿಕ್ಷೆ ವಿಧಿಸಿದೆ. ೨೫ ವರ್ಷದ ನಸೀಮ್ ಖಾನ್ ಈ ಕಟುಕ. ಬೇಕರಿಯ ಎದುರೇ ದನದ ಹೊಟ್ಟೆಗೆ ಚಾಕುವಿನಿಂದ ಮೂರು ಬಾರಿ ತಿವಿದಿದ್ದ. ತೀವ್ರ ರಕ್ತ ಸ್ರಾವದ ನಂತರ ಅದು ಅಲ್ಲೇ ಮೃತಪಟ್ಟಿತ್ತು. ಭಾರತೀಯ ದಂಡ ಸಂಹಿತೆಯ ೪೨೯ನೇ ಸೆಕ್ಷನ್ ಪ್ರಕಾರ ಆನೆ, ಕುದುರೆ, ಒಂಟೆ ಮುಂತಾದ ಪ್ರಾಣಿಗಳನ್ನು ವಿಷವುಣಿಸಿ ಅಥವಾ ತಿವಿದು ಕೊಲ್ಲುವುದು ಶಿಕ್ಷಾರ್ಹ ಅಪರಾಧ. ಈ ಹಿನ್ನೆಲೆಯಲ್ಲಿ ನಸೀಮ್‌ಗೆ ಶಿಕ್ಷೆ ವಿಧಿಸಲಾಗಿದೆ ಎಂದು ಕೋರ್ಟ್ ಹೇಳಿದೆ.

ಹಸುವಿನ ಮಾಲಕ ವೀರ್ ಸಿಂಗ್ ಈ ಬಗ್ಗೆ ದೂರು ನೀಡಿದ್ದ. ಈ ದೂರಿನ ವಿಚಾರಣೆಯ ಸಂದರ್ಭದಲ್ಲಿ ಖಾನ್‌ನ ವಕೀಲರು ವೀರ್ ಸಿಂಗ್‌ನನ್ನು ಪಾಟೀ ಸವಾಲಿಗೆ ಒಳಪಡಿಸಿರಲಿಲ್ಲ. ಘಟನೆ ಕುರಿತು ತೀರ್ಪು ನೀಡಿದ ದೆಹಲಿ ಮೆಟ್ರೊಪಾಲಿಟನ್ ನ್ಯಾಯಾಧೀಶರು, ಖಾನ್ ಮೇಲಿನ ಆರೋಪ ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಶನ್ ಯಶಸ್ವಿಯಾಗಿದೆ. ಆರೋಪಿ ಪರ ವಕೀಲರು ಸಾಕ್ಷ್ಯವನ್ನು ಪಾಟೀ ಸವಾಲಿಗೆ ಒಳಪಡಿಸದ ಕಾರಣ ಆತನ ಹೇಳಿಕೆ ಒಪ್ಪಿಕೊಳ್ಳಲೇಬೇಕಾಗಿದೆ ಎಂದು ತಿಳಿಸಿದ್ದಾರೆ. ವಯಸ್ಸಾದ ತಂದೆ ತಾಯಿ ಹಾಗೂ ಚಿಕ್ಕ ಮಗುವನ್ನು ನೋಡಿಕೊಳ್ಳಬೇಕಿರುವುದರಿಂದ ಶಿಕ್ಷೆಯಿಂದ ವಿನಾಯಿತಿ ನೀಡುವಂತೆ ನಸೀಮ್ ಮಾಡಿಕೊಂಡ ಮನವಿಯನ್ನು ನ್ಯಾಯಾಲಯ ತಳ್ಳಿ ಹಾಕಿದೆ.

(ಕೃಪೆ: ಕನ್ನಡ ಪ್ರಭ ಮತ್ತು ಪ್ರಜಾವಾಣಿ)

## ಹಳ್ಳಿಕಾರ್ ಜೋಡಿ ಎತ್ತಿಗೆ ೨ ಲಕ್ಷ!

ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಇತ್ತೀಚೆಗೆ ನಡೆದ ಕೃಷಿ ಮೇಳದಲ್ಲಿ ಪ್ರದರ್ಶಿಸಿದ್ದ ಹಳ್ಳಿಕಾರ್ ತಳಿಯ ಎತ್ತುಗಳಿಗೆ ಮಂಡ್ಯದ ವ್ಯಕ್ತಿಯೊಬ್ಬರು ರೂ.೨ ಲಕಷ ಬೆಲೆ ಕಟ್ಟಿದ್ದರು. ಆದರೆ ಅದರ ಮಾಲೀಕರಾದ ಚಿಕ್ಕವೀರಪ್ಪ ಅವರು ಎತ್ತುಗಳನ್ನು ಮಾರಾಟ ಮಾಡಲು ಒಪ್ಪಲಿಲ್ಲ. ಅವರು ನಾಲ್ಕು ವರ್ಷ ಪ್ರಾಯದ ಈ ಎತ್ತುಗಳನ್ನು ಕೇವಲ ಸಂತೋಷಕ್ಕಾಗಿ ಸಾಕುತ್ತಿದ್ದಾರೆ.

ರಾಮ, ಲಕ್ಷ್ಮಣ ಎಂಬ ಹೆಸರಿನ ಈ ಎತ್ತುಗಳಿಗೆ ನಿತ್ಯವೂ ರಾಗಿ ಮುದ್ದೆ ಮತ್ತು ಮೊಸರು ನೀಡಲಾಗುತ್ತದೆ. ಐದು ಲೀಟರ್ ಹಾಲು, ಹುರುಳಿ, ಗೋಧಿಯಿಂದ ತಯಾರಿಸಲಾದ ಪೌಷ್ಟಿಕ ಆಹಾರ, ಜೋಳದ ಬೂಸಾ, ರವೆ ಪಾಯಸ ನೀಡುತ್ತಾರೆ. 'ಎತ್ತುಗಳ ಸಾಕಾಣಿಕೆಗೆ ತಿಂಗಳಿಗೆ ಐದರಿಂದ ಹತ್ತು ಸಾವಿರ ರೂಪಾಯಿ ವೆಚ್ಚವಾಗುತ್ತಿದೆ. ನ್ನ ಸಂತೋಷಕ್ಕಾಗಿ ಇವುಗಳನ್ನು ಸಾಕುತ್ತಿದ್ದೇನೆ' ಎಂದು ಚಿಕ್ಕವೀರಪ್ಪ ತಿಳಿಸಿದರು. ಅವರಿಗೆ ಬೆಂಗಳೂರು ಕೃಷಿ ವಿ.ವಿ.ಯಿಂದ ಪ್ರಶಂಸಾ ಪತ್ರ ನೀಡಲಾಗಿದೆ.

(ಕೃಪೆ: ಪ್ರಜಾವಾಣಿ)

# ಸಮಾಜದ ಅವಿಭಾಜ್ಯ ಅಂಗವಾಗಿ ಗೋ ಸಮಾಜ

ಗೋವನ್ನು ಇಂದು ನಾವು ಅದರ ಮೂಲ ಸ್ಥಳವಾದ ನಮ್ಮ ದೇಶದಲ್ಲೇ ಮರೆತಿದ್ದೇವೆ ಎಂದರೆ ಅತಿಶಯೋಕ್ತಿ ಖಂಡಿತಾ ಅಲ್ಲ. ಆದರೆ ತೆರೆಮರೆ ಕಾಯಿಯಂತೆ ಹಲವಾರು ಜನ ಇಂದಿಗೂ ಪರಮಪೂಜನೀಯ ಗೋಮಾತೆಯನ್ನು ಜೀವಂತ ದೇವರ ರೀತಿಯಲ್ಲಿ ಕಂಡು, ತಮ್ಮ ಮನೆಯ ಸದಸ್ಯರಂತೆಯೇ ಸಾಕುತ್ತಿದ್ದಾರೆ. ಆದರೆ ನಮಗಿಂದು ಮಾಧ್ಯಮಗಳಲ್ಲಿ, ಆಧುನಿಕ ಚಿಂತನೆ ಕ್ರಿಮಿನಲ್(?) ಚಟುವಟಿಕೆಗಳು, ಕುರಾಜಕೀಯ ಚಟುವಟಿಕೆಗಳು ಇತ್ಯಾದಿಗಳ ವೈಭವೀಕರಣವಾಗುತ್ತಿದೆ. ಇವುಗಳ ಮಧ್ಯೆ ಸೇವಾಮನೋಭಾವವುಳ್ಳ ವ್ಯಕ್ತಿಗಳು ಅಥವಾ ಆ ಚಿಂತನೆಯ ಸೇವಾಕಾರ್ಯಗಳೂ ಇಂದು ಕಳೆದುಹೋಗಿದೆ ಎಂದರೆ ವಿಶೇಷವಲ್ಲ. ಜನಬೆಂಬಲ, ಸುಶಿಕ್ಷಿತರ ಅನಾದರಣೆ ಈ ರೀತಿಯಾಗಿ ಹಲವಾರು ಹಿನ್ನೆಡೆಯಿದ್ದರೂ, ದಾವಣಗೆರೆ ಜಿಲ್ಲೆ ಹರಿಹರ ತಾಲೂಕಿನ ಗಾಜೇರ ಭೀಮಪ್ಪ ಮನೆತನ ಕಳೆದ ೫ ತಲೆಮಾರುಗಳಿಂದ ತಮ್ಮಲ್ಲಿ ಸತತವಾಗಿ ಶುದ್ಧ ಭಾರತೀಯ ಗೋತಳಿಗಳನ್ನು ಸಾಕಿ ಸಲಹುತ್ತಿದ್ದಾರೆ.

ಆಕಳು ಸಮೃದ್ಧವಾಗಿ ಹಾಲು ನೀಡಿದರೆ ಅದರ ಮಾರಾಟದಿಂದ ಸಾಕಲು ಸಾಧ್ಯ ಎನ್ನುವ ಭ್ರಮೆಯ ಈ ಕಾಲದಲ್ಲೂ, ಆಕಳ ಕುಟುಂಬವನ್ನು ಸಾಕಿ ಸಲಹುವುದು ತಮ್ಮ ಕರ್ತವ್ಯವೇ ಸರಿ, ಕೇವಲ ಸೇವೆ ಮತ್ತು ಪಾಲನೆ ಅನ್ನುವ ಮನೋಧರ್ಮದವರಾದ ಪ್ರಸ್ತುತ ಗಾಜೇರ ಕುಟುಂಬದ ಹಿರಿಯರಾಗಿರುವ ಗಾಜೇರ ನಿಂಗಪ್ಪನವರು ಮುಗ್ಧ ಕೃಷಿಕರಾಗಿ ಕಾಣುತ್ತಾರೆ. ಆದರೆ ಗೋಮಾತೆಯ ಬಗ್ಗೆ ಬೆಲೆಕಟ್ಟಲಾಗದ ಶ್ರದ್ಧಾಭಕ್ತಿ ಹೊಂದಿದ್ದಾರೆ ಮಾತ್ರವಲ್ಲ ತಾವು ಹಿರಿಯರಿಂದ ಪಡೆದ ಚಿಂತನೆಯನ್ನು ತಮ್ಮ ಮುಂದಿನ ಪೀಳಿಗೆಗೆ, ಹರಿಸಿದ್ದಾರೆ. ಇದು ಈ ಕುಟುಂಬದ ಈಗಿನ ತಲೆಮಾರಿನ ೯ ನೇ ತರಗತಿ ವಿದ್ಯಾರ್ಥಿ ಮಾರುತಿ ಜೊತೆ ಮಾತಾಡಿದಾಗ ತಿಳಿದು ಮನ ತುಂಬಿ ಬರುತ್ತದೆ.

೩೫ ಎಕರೆ ನೀರಾವರಿ ಜಮೀನನ್ನು ಈ ಮನೆತನದವರು ಹರಿಹರ - ಹರಪನಹಳ್ಳಿ ರಸ್ತೆಯ ದೀಟೂರು ಗ್ರಾಮದಲ್ಲಿ ಹೊಂದಿದ್ದಾರೆ. ಅವರು ಭತ್ತ, ಗೋವಿನ ಜೋಳ, ಹತ್ತಿ, ಸೂರ್ಯಕಾಂತಿ ಗಳನ್ನು ಈ ಭಾರತೀಯ ಗೋತಳಿಗಳನ್ನು ಬಳಸಿ ಬೆಳೆಯುತ್ತಿದ್ದಾರೆ. ಸಾಧ್ಯವಾದಷ್ಟು ರಾಸಾಯನಿಕಗಳ ಬಳಕೆ ಕಡಿಮೆಮಾಡಿ ಗೋಮೂತ್ರ ಗೋಮಯಗಳನ್ನೇ ಕೃಷಿಕಾರ್ಯಕ್ಕೆ ಬಳಸುತ್ತಿದ್ದಾರೆ. ಆದರೆ ಅವರಿಗೆ ಗೋಮೂತ್ರ ಗೋಮಯಗಳ ಬಳಕೆಯನ್ನು ಕೃಷಿಕಾರ್ಯದಲ್ಲಿ ಬಳಸುವ ಕುರಿತು ಪರಿಣಿತರಿಂದ ಮಾರ್ಗದರ್ಶನ ದೊರಕಿದಲ್ಲಿ ಇದು ಸಾವಯವ ಕೃಷಿಕೇಂದ್ರ ಖಂಡಿತಾ ಆಗುತ್ತದೆ.

ಆರಂಭದಿಂದಲೂ ತಮ್ಮಲ್ಲಿರುವ ಜಾನುವಾರು ಕುಟುಂಬಕ್ಕೆ ಯಾವುದೇ ರಾಸಾಯನಿಕ/ ರಾಸಾಯನಿಕ ಮಿಶ್ರಿತ ಆಹಾರ ನೀಡುತ್ತಿಲ್ಲ ಎನ್ನುವುದು ಉನ್ನತ ವಿಚಾರ ತಮ್ಮಲ್ಲೇ ಬೆಳೆದ ಜೋಳದ ಕಡ್ಡಿ, ಭತ್ತದ ಹುಲ್ಲು ಇತ್ಯಾದಿಗಳನ್ನು ಆಹಾರವಾಗಿ ನೀಡುವುದರಿಂದ ಆ ಗೋ ಸಂತತಿಯಿಂದ ಪಡೆದ ಹೈನು ಉತ್ಪನ್ನಗಳು (ಹಾಲು, ಗೋಮೂತ್ರ, ಗೋಮಯ ಇತ್ಯಾದಿ) ರಾಸಾಯನಿಕ ರಹಿತವಾಗಿರುವುದರಿಂದ ಸಾವಯವ ಕೃಷಿಗೆ ಪೂರಕವಾಗಿದೆ. ಆ ಕೃಷಿ ಉತ್ಪನ್ನಗಳನ್ನು ಬಳಸುವ ಸಮಾಜ ರಾಸಾಯನಿಕ ಮುಕ್ತರಾಗುವುದರಿಂದ ಆರೋಗ್ಯವಂತ ಸಮಾಜವಾಗಿ ಬೆಳೆಯುತ್ತದೆ ಎನ್ನುವುದು ಉತ್ಪ್ರೇಕ್ಷೆಯಲ್ಲ.

೨೦ ಆಕಳು, ೭ ಕರುಗಳು, ೮ ಹೋರಿಗಳು ಇವುಗಳನ್ನು ಸಾಕುತ್ತಿರುವ ಇವರ ಗೋಸಂತತಿ ಅಮೃತ ಮಹಲ್, ಹಳ್ಳಿಕಾರ್, ಖಿಲಾರಿ ತಳಿಯವುಗಳಾಗಿವೆ. ಆರೋಗ್ಯವಂತ, ಸದೃಢ ಹೋರಿಗಳನ್ನು ಸಂತಾನಾಭಿವೃದ್ಧಿಗಾಗಿ ತಮ್ಮ ಸುತ್ತ ಮುತ್ತಲಿನ ಹಳ್ಳಿಯವರೂ ಬಳಸುತ್ತಿದ್ದಾರೆ. ಇದರಿಂದಾಗಿ ದೇಶೀ ತಳಿಗಳ ಅಭಿವೃದ್ಧಿಗೆ ಇದೊಂದು ಪೂರಕ ಚಟುವಟಿಕೆಯಾಗಿದೆ. ಗೋವು-ಗ್ರಾಮ-ರೈತರಿಂದಲೇ ಭಾರತಮಾತೆ - ವಿಶ್ವಮಾತೆ ಆಗುತ್ತಿರುವ ಈ ಮಹತ್ತರ ಕಾಲಘಟ್ಟದಲ್ಲಿ ಈ ರೀತಿಯ ಗ್ರಾಮ-ರೈತರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ಸಮಾಜ ಮಾಡಬೇಕಿದೆ. ಇಂದಿನ ವಿದ್ಯಾವಂತ ಯುವಜನತೆ, ಚಿಂತನಾಶೀಲ ಸಮಾಜ ಈ ಕುರಿತು ಗಂಭೀರವಾಗಿ ಯೋಚಿಸಲೇಬೇಕಿದೆ. ಹಾಗಾದಲ್ಲಿ ಮಹಾತ್ಮ ಗಾಂಧೀಜಿಯಂತವರು ಕನಸು ಕಂಡ ರಾಮ ಗ್ರಾಮ ರಾಜ್ಯ ಆಗುವ ದಿನ ಖಂಡಿತವಾಗಿಯೂ ದೂರವಿಲ್ಲ. ಅಲ್ಲದೇ ಭಾರತೀಯ ಗೋವು ಮತ್ತು ಆ ಗೋಮಾತೆಯ ಕುರಿತು ತಮ್ಮ ದೇಹಶ್ರಮವನ್ನೂ ಲೆಕ್ಕಿಸದೆ, ಹಗಲಿರುಳೂ ಕೆಲಸ ಮಾಡುತ್ತಿರುವ ಆ ಸಂತ ಶ್ರೀ ರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳನ್ನು ನೆನೆಸಿ ಕೊಳ್ಳೋಣ, ಬಹುಶಃ ಇಂದು ಸಮಾಜ ಸಿಡಿದೆದ್ದು ನಿಂತು ಗೋಮಾತೆಯ ರಕ್ಷಣೆಗೆ ಟೊಂಕ ಕಟ್ಟಿದಲ್ಲಿ ಆ ಸಂತರ ಕನಸು ಅತಿ ಶೀಘ್ರದಲ್ಲಿ ಸಾಕಾರಗೊಳ್ಳುವುದರಲ್ಲಿ ಸಂಶಯವಿಲ್ಲ.

ಈ ರೀತಿ ಮುಸುಕಿನ ಮರೆಯಲ್ಲಿ ಭಾರತೀಯ ಗೋವು ಹಾಗೂ ಅದನ್ನು ಬಳಸಿ, ಕೃಷಿ ಕಾರ್ಯದಲ್ಲಿ ಸೇವಾ ಮನೋಭಾವದಿಂದ ತೊಡಗಿಸಿಕೊಂಡ ಗೋಭಕ್ತರು/ಸೇವಕರು/ಕೃಷಿಕರ ಕುರಿತಾದ ಮಾಹಿತಿ ಇದೆಯೇ? ಇದ್ದರೆ ದಯವಿಟ್ಟು ವಿವರಗಳನ್ನು ನೇರವಾಗಿ ನಮಗೆ (govishva@gmail.com) ಕಳುಹಿಸಿಕೊಡಿ.

ಮಾಹಿತಿಗಾಗಿ ಗೋಸೇವಕ ಮನೆತನದ ವಿಳಾಸ: ಶ್ರೀ ಗಾಜೇರ ನಿಂಗಪ್ಪ, ದೀಟೂರು, ಗುತ್ತೂರು ಅಂಚೆ ೫೭೭ ೬೦೨, ಹರಿಹರ ತಾಲೂಕು, ದಾವಣಗೆರೆ ಜಿಲ್ಲೆ.

**- ಸದಾಶಿವ ಮೋಂತಿಮಾರು**

## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ ೨೭, ೨೦೦೭ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ-ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು ಹದಿನಾಲ್ಕನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ-ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ - govishva@gmail.com